# ಸೋಫಿಯಾ ಬೀಬಿ

## 'ಅಮ್ಮಾಜಾನ್'

ಮೂಲ : 'Swami Vivekananda: The Great Inspirer', **ರಾಮಕೃಷ್ಣ ಶಾರದಾ ಮಿಷನ್ ಪ್ರಕಟಣೆ**

ಅನುವಾದ : **ಸ್ವರ್ಣಗೌರಿ**

ಸ್ವಾಮಿ ವಿವೇಕಾನಂದರು ತಮ್ಮ ಶ್ರೀನಗರದ ಭೇಟಿಯ ಸಂದರ್ಭದಲ್ಲಿ ಡಾಲ್ ಲೇಕ್‌ನ ದೋಣಿ ಮನೆಯಲ್ಲಿ ತಂಗಿದ್ದರು. ಒಂದು ದಿನ ಸ್ವಾಮೀಜಿ ಮುಸ್ಲಿಂ ಧರ್ಮಕ್ಕೆ ಸೇರಿದ ಅಂಬಿಗನ ಮಗಳು ಸೋಫಿಯಾಳನ್ನು ಜಗನ್ಮಾತೆಯೆಂದು ಪೂಜಿಸಿದರು. ಆ ಸಮಯದಲ್ಲಿ ಸೋಫಿಯಾಳ ವಯಸ್ಸು ಕೇವಲ ನಾಲ್ಕು ವರ್ಷ. ಅವಳ ಮನಸ್ಸು ಅದೆಷ್ಟು ಮುಗ್ಧವಾಗಿತ್ತೆಂದರೆ ಒಮ್ಮೆ ಒಂದು ನೀಲಿ ಬಣ್ಣದ ಪುಷ್ಪದೊಡನೆ ಇಪ್ಪತ್ತು ನಿಮಿಷಗಳ ಕಾಲ ಆಟವಾಡಿದಳು! ಸ್ವಾಮೀಜಿ ಕುಮಾರಿ ಪೂಜೆ ಮಾಡುವುದನ್ನು ವೀಕ್ಷಿಸುವುದೇ ದೇವದುರ್ಲಭ ದೃಶ್ಯವೆನ್ನುತ್ತಾರೆ. ಎಂತಹವರ ಹೃದಯವೂ ಭಕ್ತಿಯ ಶೈತ್ಯದಿಂದ ಕರಗಿಹೋಗುತ್ತಿತ್ತಂತೆ.

ಸ್ವಾಮೀಜಿ ಕಾಶ್ಮೀರಕ್ಕೆ ವಿದಾಯ ಹೇಳಿದಾಗ ಈ ಮುಗ್ಧ ಬಾಲಕಿ ಸೇಬಿನ ಹಣ್ಣುಗಳನ್ನು ತುಂಬಿದ ಬುಟ್ಟಿಯನ್ನು ಹೊತ್ತು, ಪುಟ್ಟ ಪುಟ್ಟ ಹೆಜ್ಜೆಗಳನ್ನಿಡುತ್ತಾ ಬಂದಳು. ಬುಟ್ಟಿಯನ್ನು ಗಾಡಿಯಲ್ಲಿಟ್ಟು ಸ್ವಾಮೀಜಿ ಕಣ್ಮರೆಯಾಗುವವರೆಗೆ ನಿಂತಿದ್ದಳು! ಸೋದರಿ ನಿವೇದಿತಾ ಈ ಮನೋಜ್ಞವಾದ ಘಟನೆಯನ್ನು ಕುರಿತು ಸುಂದರವಾಗಿ ವರ್ಣಿಸುತ್ತಾಳೆ: 'ಆ ಚಿಕ್ಕ ಹುಡುಗಿಗೆ ನಾಲ್ಕು ವರ್ಷ; ದಷ್ಟಪುಷ್ಟವಾಗಿದ್ದಳು. ಅವಳು ಮುಖ್ಯ ಅಂಬಿಗನ ಮಗಳು. ಆ ಅಂಬಿಗನಿಗೆ ಸ್ವಾಮೀಜಿ ಮೇಲಿನ ಭಕ್ತಿಯನ್ನು ನಾವಾಗಲೇ ತಿಳಿಸಿರುವೆವು. ಆ ಹುಡುಗಿಯ ತಲೆಯ ಮೇಲೆ ಒಂದು ಹಣ್ಣಿನ ಬುಟ್ಟಿ ಇತ್ತು. ಅವಳಿಗೆ ಇನ್ನು ಸರಿಯಾಗಿ ನಡೆಯುವುದಕ್ಕೂ ಬಾರದು. ಆದರೂ ದೃಢವಾಗಿ ಮುಂದಡಿಯಿಡುತ್ತಾ ಸ್ವಾಮೀಜಿ ಸಮೀಪಕ್ಕೆ ಬಂದಳು. ಕಾಶ್ಮೀರವನ್ನು ಬಿಟ್ಟು ಅಗಲುತ್ತಿದ್ದ ಸ್ವಾಮೀಜಿಯವರ ಪ್ರಯಾಣಕ್ಕಾಗಿ ಆ ಹಣ್ಣನ್ನು ನೀಡಿ, ಮುಗುಳ್ನಗೆಯೊಂದಿಗೆ ನಿಂತು ಅವರನ್ನು ಬೀಳ್ಕೊಟ್ಟಳು.'

ಸೋಫಿಯಾ ಬೀಬಿ ಹಿಂದಿ, ಉರ್ದು ಭಾಷೆಗಳಲ್ಲಿ ಓದಲು, ಬರೆಯಲು ಕಲಿತಿದ್ದಳು. ಈ ದೋಣಿ ಮನೆಗಳಲ್ಲಿ ಬೆಸ್ತರು ತಮ್ಮ ಕುಟುಂಬದೊಡನೆ ವಾಸಿಸುತ್ತಿದ್ದರು. ಇವರು ಉದಾರಿಗಳಾದ ಕಾರಣ ಅನೇಕ ದೊಡ್ಡ ವ್ಯಕ್ತಿಗಳು ಆಗಾಗ್ಗೆ ದೋಣಿ ಮನೆಯಲ್ಲಿ ತಂಗುತ್ತಿದ್ದರು. ಹೀಗೆ ಸೋಫಿಯಾಗೆ ರಾಜವಂಶಸ್ಥರೊಡನೆ ಸಂಬಂಧ ಬೆಸೆದಿತ್ತು. ಸೇವಾಮನೋಭಾವದಿಂದ ಕೂಡಿದ ಸೋಫಿಯಾಳಲ್ಲಿ ದಯೆ ಮತ್ತು ಗಾಂಭೀರ್ಯ ಬಾಲ್ಯದಿಂದಲೇ ಮೈವೆತ್ತ ಗುಣಗಳು. ಒಮ್ಮೆ ತನ್ನ ಪತಿಯ ಮನೆಯ ಬಳಿ ಗುಡಿಸಲೊಂದು ಅಗ್ನಿಗೆ ಆಹುತಿಯಾಯಿತು. ಕೂಡಲೇ ಆಹಾರ ಸಾಮಗ್ರಿ ಹಾಗೂ ಇತರ ಮನೆಬಳಕೆಯ ವಸ್ತುಗಳನ್ನು ನೀಡುವ ಮೂಲಕ ಸೋಫಿಯಾ ಅವರಿಗೆ ನೆರವಾದಳು. ಅಷ್ಟೇ ಅಲ್ಲದೆ ಗಲೀಚಾ (ರತ್ನಗಂಬಳಿ) ತಯಾರಿಸುವ ಕಸುಬಿನಲ್ಲಿ ತರಬೇತಿ ಕೊಡಿಸಿದಳು. ಇವಳ ಸಮಯೋಚಿತ ನೆರವಿನಿಂದ ಆ ಕುಟುಂಬ ಆರ್ಥಿಕವಾಗಿ ಬಹುಬೇಗನೆ ಚೇತರಿಸಿಕೊಂಡಿತು. ಆದ್ದರಿಂದ ಅವರೆಲ್ಲರೂ ಆಕೆಯನ್ನು ಪ್ರೀತಿಯಿಂದ 'ಅಮ್ಮಾಜಾನ್' ಎಂದು ಕರೆಯುತ್ತಿದ್ದರು. ಜನರೆಲ್ಲಾ 'ಫಿರ್'(ಸಾಧು)ರಿಂದ ಆಶೀರ್ವದಿಸಲ್ಪಟ್ಟವಳೆಂದು ಆಕೆಯನ್ನು ಗೌರವಿಸುತ್ತಿದ್ದರು. ಚಂದನವಾಡಿಯಲ್ಲಿದ್ದ ತನ್ನ ಜಮೀನಿನಲ್ಲಿ ಸ್ಥಳೀಯ ಬಡ ಹೆಣ್ಣುಮಕ್ಕಳಿಗೆ ಕೆಲಸ ನೀಡಿದ್ದಳು. ಬಂದ ಲಾಭದಲ್ಲಿ ಶೇಕಡಾ ೬ ಅವರಿಗೆ, ತನಗೆ ಶೇಕಡಾ ೧೦. ಆ ಉತ್ಪನ್ನಗಳು ಅದೆಷ್ಟು ಚೆನ್ನಾಗಿದ್ದವೆಂದರೆ, ದಳ್ಳಾಳಿಗಳು ಮುಂಗಡ ಹಣ ನೀಡಿ ಕಾಯ್ದಿರಿಸಿಕೊಳ್ಳುತ್ತಿದ್ದರು. ಸಾಧುಗಳು, ಫಕೀರರು, ಮೌಲ್ವಿಗಳೆಂದರೆ ಅಪಾರ ಗೌರವವುಳ್ಳ ಅವಳನ್ನು ಅವರುಗಳು ಸಹ 'ಸೋಫಿಯಾ ತಾಯಿ' ಎಂದು ಅಕ್ಕರೆಯಿಂದ ಸಂಬೋಧಿಸುತ್ತಿದ್ದರು. ಶ್ರೀನಗರದ ಅನೇಕ ಹಿಂದೂ ದೇವಾಲಯಗಳಲ್ಲಿ ಆಕೆ ಹಣ್ಣು ಹಂಪಲಗಳನ್ನು ಹಂಚಿಸುತ್ತಿದ್ದಳು. ಚಂದನವಾಡಿಯಲ್ಲಿ ಅಮರನಾಥ ಯಾತ್ರಿಕರಿಗೆಂದು ವಿಶ್ರಾಂತಿಧಾಮವನ್ನೂ ಆಕೆ ನಿರ್ಮಿಸಿದ್ದಳು.



ಅವಳ ಜೀವನ ಮುಂದೆ ರೂಪುಗೊಂಡ ಬಗೆಯನ್ನು ನೆನೆದಾಗ ಸ್ವಾಮೀಜಿಯವರ ಈ ವಾಣಿ ನೆನಪಾಗುವುದು: ''ಜಗನ್ಮಾತೆಯ ಜೀವಂತ ಸ್ವರೂಪಿಣಿಯರಾದ ಹೆಂಗಸರನ್ನು ಉದ್ಧರಿಸಲು ಪ್ರಯತ್ನಿಸದಿದ್ದಲ್ಲಿ ನೀವು ಮುಂದುವರಿಯಲು ಬೇರಾವ ಹಾದಿಯೂ ಇಲ್ಲ...''

*(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ. ೮, ಪು. ೨೧೩)*